[redacted]



## ಪವಾಡ ರಹಸ್ಯ ಬಯಲು ಕಾರ್ಯಕ್ರಮ

# ನಿತ್ಯ ಜೀವನದಲ್ಲಿ ವಿಜ್ಞಾನ ಹಾಸುಹೊಕ್ಕಾಗಿದೆ: ಎಸ್ ಆರ್ ಡೊಂಗರೆ



ಬೆಳಗಾವಿ:– ವಿಜ್ಞಾನವು ಮನುಷನ ಜೀವನದ ಅವಿಭಾಜ್ಯ ಅಂಗವಾಗಿದೆ ವಿಜ್ಞಾನವಿಲ್ಲದೆ ಜಗತ್ತೆ ಇಲ್ಲ ನಿತ್ಯ ಜೀವನದಲ್ಲಿ ವಿಜ್ಞಾನ ಹಾಸುಹೊಕ್ಕಾಗಿದ್ದು, ಗ್ರಾಮೀಣ ಜನರಿಗೂ ವಿಜ್ಞಾನದ ಅರಿವು ಮೂಡಿಸಬೇಕು ಎಂದು ರಾಷ್ಟ್ರಪ್ರಶಸಿ ವಿಭೂಷಿತ ನಿವೃತ್ತ ಶಿಕ್ಷಕರಾದ ಎಸ್ ಆರ್ ಡೊಂಗರೆ ಅಭಿಪ್ರಾಯಪಟ್ಟರು.

ಮಹಿಳಾ ಕಲ್ಯಾಣ ಸಂಸ್ಥೆ,ಬೆಳಗಾವಿ ಹಾಗೂ ಜಯಭಾರತ ಫೌಂಡೇಶನ,ಬೆಳಗಾವಿ ಇವರ ಸಹಯೋಗದಲ್ಲಿ ನಗರದ ಚಂದ್ರಗಿರಿ ಶಿಕ್ಷಣ ಮಹಾ ವಿದ್ಯಾಲಯದ ಪ್ರಶಿಕ್ಷಣಾರ್ಥಿಗಳಿಗೆ ವೈಜ್ಞಾನಿಕ ಮನೋಭಾವನೆ ಮೂಡಿಸುವ ವಿಜ್ಞಾನ ಒಂದು ಚಿಂತನೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಸಮಾಜದಲ್ಲಿ ಎದುರಾಗುವ ಅನೇಕ ಸಮಸ್ಯೆಗಳಿಗೆ ವಿಜ್ಞಾನದಿಂದ ಪರಿಹಾರ ಕಂಡುಕೊಳ್ಳಬಹುದು ನಮ್ಮಲ್ಲಿ ಆಗುವ ಪ್ರತಿ ಬೆಳವಣಿಗೆಗೂ ವೈಜ್ಞಾನಿಕ ಕಾರಣವಿರುತ್ತದೆ ಇದನ್ನು ಅರಿಯದೆ ಅನೇಕರು ಮೂಢನಂಬಿಕೆಗೆ ಬಲಿಯಾಗುತ್ತಿದ್ದು ವಿದ್ಯಾರ್ಥಿಗಳು ವೈಜ್ಞಾನಿಕ ಚಿಂತನೆ ಹಾಗೂ ಸಂಶೋಧನೆ ಮೂಲಕ ಅಂಧಕಾರ ತೊಡೆದು ಹಾಕಬೇಕು, ಭಾವಿ ಶಿಕ್ಷಕರಾಗುವ ತಾವುಗಳು ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆ ಬಲಗೊಳಿಸಬೇಕು ಎಂದು ಸಲಹೆ ನೀಡಿದರು.

ವಿಜಯಪುರ ಜಿಲ್ಲೆಯ ಗಣಿ ಸರಕಾರಿ ಪದವಿಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯರಾದ ಬಿ ಎಸ್ ವಜ್ರದ ಮಾತನಾಡಿ ವಿಜ್ಞಾನ ಎಂಬುದು ನಾಶ ಮಾಡುವುದಲ್ಲ ಇದು ಜಗತ್ತನ್ನು ಕಟ್ಟಲು ಬೇಕಾದ ಸಂಶೋಧನೆ, ಮಾನವೀಯ ಮೌಲ್ಯಗಳನ್ನು ಬೆಳೆಸುವ ಸಾಧನ ಸತ್ಯವನ್ನು ಶೋಧಿಸಲು ವಿಜ್ಞಾನ ಇಂದಿನ ದಿನಮಾನಗಳಲ್ಲಿ ಅತ್ಯಗತ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಚಂದ್ರಗಿರಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರಾದ ಎ ಎಲ್ ಪಾಟೀಲ ಅಧ್ಯಕ್ಷತೆ ವಹಿಸಿದ್ದರು, ಬೆಲ್ಲದ ಬಾಗೇವಾಡಿಯ ಭರತೇಶ ವಿದ್ಯಾಲಯದ ಉಪನ್ಯಾಸಕರಾದ ಎಸ್ ಬಿ ಮುನ್ನೊಳ್ಳಿ,ಅರ್ಜುನ ಶಿಂಧೆ, ಕರ್ನಾಟಕ ಪಬ್ಲಿಕ ಶಾಲೆಯ ಪ್ರಾಚಾರ್ಯರಾದ ಕಿರಣ ಚೌಗಲಾ ಹಾಗೂ ಮಹಿಳಾ ಕಲ್ಯಾಣ ಸಂಸ್ಥೆಯ ಗೌರವ ಕಾರ್ಯದರ್ಶಿ ವೈಜಯಂತಿ ಚೌಗಲಾ ಉಪಸ್ಥಿತರಿದ್ದರು. ಉಪನ್ಯಾಸಕಿ ಗಿರಿಜಾ ಸುಂಕದ ಸ್ವಾಗತಿಸಿ ವಂದಿಸಿದರು

# ಹತ್ತರಗಿ ಹರಿಮಂದಿರವು ಭಕ್ತರ ಪಾಲಿನ ಆರಾಧ್ಯ ತಾಣ



ಯಮಕನಮರಡಿ : ಜನರಲ್ಲಿ ಧಾರ್ಮಿಕ ಮನೋಭಾನೆ ಬೆಳೆಸುವದರ ಮೂಲಕಕ ಕರ್ನಾಟಕ ಮಹಾರಾಷ್ಟ್ರ ರಾಜ್ಯಗಳ ಭಕ್ತರ ಪಾಲಿಗೆ ಪಾತ್ರರಾಗಿ ಹರಿಮಂದಿರವೂ ಆರಾಧ್ಯ ತಾಣವಾಗಿದೆ ಎಂದು ಕ್ಷೇತ್ರ ಹತ್ತರಗಿ ಕಾರಿಮಠದ ಶ್ರೀ ಗುರುಸಿದ್ದೇಶ್ವರ ಮಹಾಸ್ವಮಿಗಳ ಹಳಿದರು.

ಅವರು ದಿ. 10 ರಂದು ಹತ್ತರಗಿ ಹರಿಮಂದಿರದ ಪೀಠಾಧೀಶರಾದ ಶ್ರೀ ಡಾ. ಆನಂದ ಗೋಸಾವಿ ಮಹಾರಾಜರ 63ನೇ ಹುಟ್ಟುಹಬ್ಬದ ನಿಮಿತ್ಯ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಮಾತನಾಡಿದರು. ಯಾವುದೇ ಆಡಂಬರ ಇಲ್ಲದೆ ಸರಳವಾಗಿ ತಮ್ಮ 63ನೇ ಜನ್ಮದಿನವನ್ನು ಆಚರಿಸಿಕೊಂಡಿದ್ದಾರೆ. ಡಾ. ಆನಂದ ಗೋಸಾವಿ ಅವರು ಕರ್ನಾಟಕ ಮಹಾರಾಷ್ಟ್ರ ರಾಜ್ಯಗಳ ನಡೆದಾಡುವ ದೇವರು ಆಗಿದ್ದಾರೆ ಎಂದು ಹೇಳಿದರು.

ಡಾ. ಆನಂದ ಗೋಸಾವಿ ಇವರು ಆರ್ಶಿವಚನ ನೀಡಿದರು. ಯುವ ದುರೀಣರಾದ ರವೀಂದ್ರ ಜಿಂಡ್ರಾಳಿ ಹುಕ್ಕೇರಿ ತಾ.ಪಂ. ಮಾಜಿ ಅಧ್ಯಕ್ಷ ದಸ್ತಗಿರ ಬಸ್ಸಾಪೂರಿ ರವೀಂದ್ರ ಹಂಜಿ, ಹತ್ತರಗಿ ಗ್ರಾ.ಪಂ. ಮಾಜಿ ಅಧ್ಯಕ್ಷ ಮಹಾದೇವ ಪಟೋಳಿ, ಪತ್ರಕರ್ತರಾದ ಗೋಪಾಲ ಚಿಪಣಿ, ಎ.ಎಂ. ಕರ್ನಾಚಿ, ದೀಪಕ ನಾಡಗೌಡ ಸೇರಿದಂತೆ ಅನೇಕ ಭಕ್ತ ವೃಂದವರು ಸಾಹಿತಿಗಳು ಡಾ. ಆನಂದ ಗೋಸಾವಿಯವರ 63ನೇ ಹುಟ್ಟ ಹಬ್ಬದ ಶುಭಾಶಯ ಕೋರಿದರು.

## ಕುಡಿಯುವ ನೀರಿನ ಸಮಸ್ಯೆ: ಸಹಾಯವಾಣಿ ಕೇಂದ್ರ ಆರಂಭ

ಬೆಳಗಾವಿ,ಮಾ.13–: ಬೆಳಗಾವಿ ಗ್ರಾಮೀಣ ಪ್ರದೇಶದಲ್ಲಿ ಸಾರ್ವಜನಕರಿಗೆ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆಯಾದರೆ. ತಾಲೂಕ ಪಂಚಾಯತ ಕಚೇರಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ದಾಖಲಾಗುವ ದೂರುಗಳನ್ನು ಸ್ವೀಕರಿಸಲು ಸಹಾಯವಾಣಿ ಕೇಂದ್ರವನ್ನು ತೆರೆಯಲಾಗಿದೆ.

ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ 0831–2407229 ಈ ಸಹಾಯವಾಣಿಗೆ ಸಂಪರ್ಕಿಸಬುದು ಎಂದು ಬೆಳಗಾವಿ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುಡಿಯುವ ನೀರಿನ ಪೂರೈಕೆ: ಸಹಾಯವಾಣಿ ಕೇಂದ್ರ ಆರಂಭ

ಬೆಳಗಾವಿ,ಮಾ.13–: ಮೂಡಲಗಿ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಸಾರ್ವಜನಕರಿಗೆ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆಯಾದರೆ ತಾಲೂಕ ಪಂಚಾಯತ ಕಚೇರಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ದಾಖಲಾಗುವ ದೂರುಗಳನ್ನು ಸ್ವೀಕರಿಸಲು ಸಹಾಯವಾಣಿ ಕೇಂದ್ರವನ್ನು ತೆರೆಯಲಾಗಿದೆ. ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ 08334–200063 ಈ ಸಹಾಯವಾಣಿಗೆ ಸಂಪರ್ಕಿ ಸಬುದು ಎಂದು ಮೂಡಲಗಿ ತಾಲೂಕ ಪಂಚಾಯತ ಕಾರ್ಯನಿರ್ವಾ ಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಯೋಗಿ ಬಿರಾದಾರ ಇವರ ಚಿತ್ರಕಲಾ ಹಾಗೂ ಛಾಯಾಚಿತ್ರ ಕಲಾ ಪ್ರದರ್ಶನ

# ಚಿತ್ರಕಲಾವಿದನ ಕುಂಚದಲ್ಲಿ ವಿಶ್ವವೇ ಅಡಗಿದೆ: ಪ್ರಸಾದ ಪಂಡಿತ



ಬೆಳಗಾವಿ 11– ಚಿತ್ರಕಾರನ ಕುಂಚ ಚಿಕ್ಕದಾದರೂ ಅದರಲ್ಲಿ ವಿಶ್ವವೇ ಅಡಗಿದೆ ಅಂಥ ಸಾಮರ್ಥ್ಯ ಕಲಾವಿದನಲ್ಲಿ ಅಡಗಿದೆ. ಎಲ್ಲ ಕಲೆಗಳಲ್ಲಿ ಚಿತ್ರಕಲೆಯು ಅತ್ಯಂತ ಪರಿಣಾಮಕಾರಿ ಮಾಧ್ಯಮವಾಗಿದ್ದು ಕಲಾರಸಿಕರನ್ನು ಬೇಗನೆ ತನ್ನತ್ತ ಸೆಳೆಯುತ್ತದೆ. ತನ್ನ ಕಲೆಯಿಂದ ಹಲವಾರು ವಿಷಯಗಳನ್ನು ಕಲಾರಸಿಕರಿಗೆ ತಿಳಿಸಬಹುದಾಗಿದ್ದು ಆ ಸಾಮರ್ಥ್ಯವನ್ನು ಕಲಾವಿದ ಯೋಗಿ ಬಿರಾದಾರರ ಹೊಂದಿದ್ದಾರೆ ಎಂದು ಅತ್ಯಂತ ಜನಪ್ರಿಯ ಕಲಾವಿದ ಪ್ರಸಾದ ಪಂಡೀತ ಅವರು ಇಂದಿಲ್ಲಿ ಹೇಳಿದರು

ಕಲಾವಿದ ಯೋಗಿ ಬಿರಾದಾರ ಇವರ ವರ್ಣ ಚಿತ್ರಕಲಾ ಹಾಗೂ ಛಾಯಾಚಿತ್ರ ಕಲಾ ಪ್ರದರ್ಶನ "ರಂಗಾವೀಷ್ಕಾರ" ಇದೇ ದಿನಾಂಕ 7 ರಿಂದ ದಿ. 13 ವರೆಗೆ ಮುಂಜಾನೆ 11 ಗಂಟೆಗೆ ತಿಲಕವಾಡಿಯ ರೇಲ್ವೆ ಎರಡನೇ ಗೇಟ್ ಹತ್ತಿರವಿರುವ ಕಲಾಮಹರ್ಷಿ ಕೆ.ಬಿ. ಕುಲಕರ್ಣಿ ಆರ್ಟ ಗ್ಯಾಲರಿ, ವಾರೇಕರ ನಾಟ್ಯಗೃಹ ಮಂದಿರದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಅತಿಥಿಗಳಾಗಿ ಆಗಮಿಸಿದ್ದ ಪ್ರಸಾದ ಪಂಡಿತ ಅವರು ಮೇಲಿನಂತೆ ಹೇಳಿದರು. ಮುಂದೆ ಮಾತನಾಡುತ್ತ ಪ್ರಸಾದ ಪಂಡಿತ ಅವರು ಯಾವುದೇ ಕಲೆಯೆನ್ನುವುದು ಒಂದು ತಪಸ್ಸಿದ್ದಂತೆ, ಇಂದಿನ ಚಿತ್ರಕಲಾ ಪ್ರದರ್ಶನದ ಕಲಾವಿದ ಯೋಗಿ ಬಿರಾದಾರ ಇವರು ಬಿಡಿಸಿರುವ ಚಿತ್ರಕಲೆಗಳು ಅತ್ಯಂತ ನೈಜತೆಯಿಂದ ಕೂಡಿದ್ದು ಇವು ಕೈಯಿಂದ ಬಿಡಿಸಿದ ಚಿತ್ರಗಳೋ ಅಥವಾ ಫೋಟೋಗ್ರಾಫಿಯೋ ಎನ್ನುವಂತಿವೆ. ಈ ಕೈಚಳಕ ಯೋಗಿ ಬಿರಾದಾರರಲ್ಲಿದೆ. ಕಲಾರಸಿಕರು ಇವರ ಚಿತ್ರಗಳನ್ನು ಕೊಂಡುಕೊಳ್ಳುವ ಮೂಲಕ ಪ್ರೋತ್ಸಾಹಿಸಬೇಕೆಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಬೆಳಗಾವಿಯ ಸಿ.ಆರ್.ಇ.ಡಿ.ಎ.ಐ. ಅಧ್ಯಕ್ಷರಾದ ದೀಪಕ ಗೋಜಗೇಕರ ಅವರು ಆಗಮಿಸಿದ್ದರು. ನಿವೃತ್ತ ಪ್ರಾಚಾರ್ಯ, ಲೇಖಕ ಆನಂದ ಮೆಣಸೆ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಜಗಧೀಶ ಕುಂಟೆ ಹಾಗೂ ಕಲಾವಿದ ಯೋಗಿ ಬಿರಾದಾರ ಉಪಸ್ಥಿತರದ್ದರು.ಕೊನೆ ದಿನವಾದ ಇಂದು ದಿ. 13 ಬುಧವಾರದಂದು ಮುಂಜಾನೆ 11 ರಿಂದ ಸಾಯಂಕಾಲ7–30 ರವರೆಗೆ.

## ಇಂದು ಕಿಡ್ನಿ ಉಚಿತ ತಪಾಸಣಾ ಶಿಬಿರ

ಬೆಳಗಾವಿ: ವಿಶ್ವಕಿಡ್ನಿ ದಿನಾಚರಣೆ ಅಂಗವಾಗಿ ಕೆಎಲ್ಇ ಸಂಸ್ಥೆಯಡಾ.ಪ್ರಭಾಕರಕೋರೆಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾ ಕೇಂದ್ರದ ಮೂತ್ರಪಿಂಡ ವಿಭಾಗವುಮೂತ್ರಪಿಂಡ (ಕಿಡ್ನಿ) ತಪಾಸಣಾ ಶಿಬಿರವನ್ನು ಇದೇ ದಿ.14 ಮಾರ್ಚ 2024ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ1ಗಂಟೆಯವರೆಗೆಆಸ್ಪತ್ರೆಯಲ್ಲಿಏರ್ಪಡಿಸಲಾಗಿದೆ.

ದೀರ್ಘ ಕಾಲೀನ ಮಧುಮೇಹ ಮತ್ತುರಕ್ತದೊತ್ತಡ, ಕಿಡ್ನಿಯಲ್ಲಿ ಹರಳುಗಳಿಂದ ಬಳಲುತ್ತಿದ್ದರೆ, ವೃದ್ಧಾಪ್ಯ, ಬಹಳ ದಿನಗಳಿಂದ ನೋವು ನಿವಾರಕ ಮಾತ್ರೆ ಸೇವಿಸುತ್ತಿದ್ದರೆ. ಬೊಜ್ಜು, ಬಹುವಿಧ ಹರಳು ಹಾಗೂ ಮೂತ್ರಪಿಂಡಕ್ಕೆ ಶಸ್ತ್ರಚಿಕಿತ್ಸೆ ನೆರವೇರಿಸದ್ದರೆ, ಮೂತ್ರನಾಳದ ಸೋಂಕು, ಕುಟುಂಭದಲ್ಲಿ ಯಾರಾದರೂ ಕಿಡ್ನಿ ತೊಂದರೆಗೊಳಗಾಗಿದ್ದ ಇತಿಹಾಸವಿದ್ದರೆ. ದೀರ್ಘಕಾಲೀನಯಕೃತ್ತ (ಲೀವರ) ಮತ್ತು ಹೃದ್ರೋಗದಿಂದ ಬಳಲುತ್ತಿರುವವರು ಈ ಶಿಬಿರದಲ್ಲಿ ಪಾಲ್ಗೊಂಡುಕಿಡ್ನಿ ಮತ್ತುಅದಕ್ಕೆ ಸಂಬಂಧಿಸಿದ ರೋಗಗಳನ್ನು ತಪಾಸಿಸಿಕೊಂಡು ಸೂಕ್ತ ಸಲಹೆ ಹಾಗೂ ಚಿಕಿತ್ಸೆ ಪಡೆಯಲುಕೋರಲಾಗಿದೆ.ಕಿಡ್ನಿ ಸಂಬಂಧಿತರಕ್ತತಪಾಸಣೆಯಲ್ಲಿ ಶೇ.20ರಷ್ಟು ರಿಯಾಯ್ತಿ ನೀಡಲಾಗುವದು.

ಕೆಎಲ್ಇ ಸಂಸ್ಥೆಯಡಾ.ಪ್ರಭಾಕರಕೋರೆಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾಕೇಂದ್ರದ, ಜನಸಂಪರ್ಕ ವಿಭಾಗ, ದೂ.0831 2473777, ವಿಸ್ತರಣೆ. 1116, 1302 ಅಥವಾ ಮೊ.+91 9141080949 ಇಲ್ಲಿಗೆ ಸಂಪರ್ಕಿಸಲುಕೋರಲಾಗಿದೆ. ಕೆಎಲ್ಇ ಸಂಸ್ಥೆಯಡಾ.ಪ್ರಭಾಕರಕೋರೆಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾಕೇಂದ್ರದ, ಜನಸಂಪರ್ಕ ವಿಭಾಗ, ದೂ.0831 2473777, ವಿಸ್ತರಣೆ. 1116, 1302 ಅಥವಾ ಮೊ.+91 9141080949ಇಲ್ಲಿಗೆ ಸಂಪರ್ಕಿಸಲುಕೋರಲಾಗಿದೆ.

# ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸುವ ಕಾಮಗಾರಿಗೆ ಭೂಮಿಪೂಜೆ



ಗದಗ ಮಾರ್ಚ 12: ಜಿಲ್ಲಾ ಡಳಿತ, ಪ್ರವಾಸೋದ್ಯಮ ಇಲಾಖೆ, ಗದಗ ಅವರಿಂದ ಗದಗ ಭೀಷ್ಮ ಕೆರೆಗೆ ಆಗಮಿಸಿದ ಪ್ರವಾಸಿಗರಿಗೆ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸುವ ಅಂದಾಜು 62 ಲಕ್ಷ ಮೊತ್ತದ ಕಾಮಗಾರಿಗೆ ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರು ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮಾಜಿ ಶಾಸಕ ಡಿ.ಆರ್.ಪಾಟೀಲ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಉಪವಿಭಾಗಾಧಿಕಾರಿ ಡಾ.ವೆಂಕಟೇಶ ನಾಯ್ಕ, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಕೊಟ್ರೇಶ ವಿಭೂತಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಗೋಕಾಕದಿಂದ ಶ್ರೀಶೈಲಕ್ಕೆ ಪಾದಯಾತ್ರೆ

ಗೋಕಾಕ :ಪ್ರತಿ ವರ್ಷದಂತೆ ಗೋಕಾಕದಿಂದ ಶ್ರೀಶೈಲಕ್ಕೆ ಪಾದಯಾತ್ರೆ ಕಾರ್ಯಕ್ರಮ ಇದೆ ಮಾರ್ಚ್ 2024 ರ ರವಿವಾರ ದಿನಾಂಕ 24 ರಂದು ಬೆಳಿಗ್ಗೆ 5 ಗಂಟೆಗೆ ಹೊರಡಲಿದೆ.

ಗೋಕಾಕ ಶೂನ್ಯ ಸಂಪಾದನ ಮಠದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳ ಆಶೀರ್ವಾದದಿಂದ ಈ ಪಾದಯಾತ್ರೆ ನಡೆಯುತ್ತಿದೆ.

ಈ ಪಾದಯಾತ್ರೆಯಲ್ಲಿ ಭಾಗವಹಿಸುವ ಭಕ್ತಾದಿಗಳು ಶನವಾರ ದಿನಾಂಕ 23 ರಂದು ಸಾಯಂಕಾಲ ಗೋಕಾಕ

ನಗರದ ಶೂನ್ಯ ಸಂಪಾದನ ಮಠದ ನಗರದ ಶ್ರೀ ಚನ್ನಬಸವೇಶ್ವರ ವಿದ್ಯಾಪೀಠ ವಾಲ್ಮೀಕಿ ವೃತ್ತ ಶೂನ್ಯ ಸಂಪಾದನ ಮಠದ ಶಾಲಾ ಆವರಣದಲ್ಲಿ ಆಗಮಿಸಬೇಕೆಂದು ಕಾರ್ಯಕ್ರಮ ಆಯೋಜಕರಾದ ಮಹಾಂತಯ್ಯಾ ಗವಿಮಠ 9482084381' ರಾಯಪ್ಪ ಹೆಗಡೆ 9741856474, ಸೋಮಶೇಖರ ಮಗದುಮ್ಮ 9481481444 ಇವರನ್ನು ಸಂಪರ್ಕಿಸಲು ಪ್ರಕಟಣೆ ಮೂಲಕ ಕೊರಿದ್ದಾರೆ.ವಿದ್ಯಾಪೀಠ ವಾಲ್ಮೀಕಿ ವೃತ್ತ ಶೂನ್ಯ ಸಂಪಾದನ ಮಠದ ಶಾಲಾ ಆವರಣದಲ್ಲಿ ಆಗಮಿಸಬೇಕೆಂದು ಕಾರ್ಯಕ್ರಮ ಆಯೋಜಕರಾದ ಮಹಾಂತಯ್ಯಾ ಗವಿಮಠ 9482084381' ರಾಯಪ್ಪ ಹೆಗಡೆ 9741856474, ಸೋಮಶೇಖರ ಮಗದುಮ್ಮ 9481481444 ಇವರನ್ನು ಸಂಪರ್ಕಿಸಲು ಪ್ರಕಟಣೆ ಮೂಲಕ ಕೊರಿದ್ದಾರೆ.

# ನೂತನ ಕೆಡಿಪಿ ಸದಸ್ಯ ಕಲ್ಲಪ್ಪ ಕಟ್ಟಿಯವರಿಗೆ ಸನ್ಮಾನ



ಯಮಕನಮರಡಿ : ಸೋಮವಾರ ದಿ.11.03.2024.ರಂದು ಹುಕ್ಕೇರಿ ತಾಲೂಕಿನ ಹಿಡಕಲ್ ಡ್ಯಾಮ್ ಸರ. ಎಂ ವಿಶ್ವೇಶ್ವರಯ್ಯ ಪ್ರೌಢಶಾಲೆಯ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹುಕ್ಕೇರಿ ತಾಲೂಕ ಕೆ. ಡಿ. ಪಿ.ಸಮೀತಿಗೆ ನೂತನ ಸದಸ್ಯರಾಗಿ ಆಯ್ಕೆಯಾದ ಕಲ್ಲಪ್ಪ.ಕಟ್ಟಿ.ಹೊಸೂರ. ಹಾಗೂ 27 ನೆಯ ಜನೆವರಿ 2024 ರಂದು ಏಷಿಯಾ ಅಂತರರಾಷ್ಟ್ರೀಯ ಸಾಂಸ್ಕೃತಿಕ ಸಂಶೋಧನಾ ವಿಶ್ವ ವಿದ್ಯಾಲಯ ನವದೆಹಲಿ ಇವರು ಮಕ್ಕಳ ಸಾಹಿತಿಗಳು,ರಾಜ್ಯ ಸರ್ಕಾರ ಪ್ರಶಸ್ತಿ ಪುರಸ್ಕೃತರು, ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ಬೆಳಗಾವಿ ಜಿಲ್ಲಾ ಉಪಾಧ್ಯಕ್ಷರು, ಡಾ. ಬಿ.ಅರ್.ಅಂಬೇಡ್ಕರ್.ಎಸ್ಸಿ.ಎಸ್ಟಿ ಸಮಾಜ ಸೇವಾ ಸಂಘ ಬೆಳಗಾವಿ ಸಂಸ್ಥಾಪಕ ಅಧ್ಯಕ್ಷರಾದ, ಡಾ.ಪ್ರಕಾಶ.ಅ.ಹೊಸಮನಿ ಇವರನ್ನು ಸಮಾಜದ ಎಲ್ಲಾ ಮುಖಂಡರು ಸತ್ಕರಿಸಿ, ಅಭಿನಂದಿಸಿದರು.ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಬೆಳಗಾವಿ ಜಿಲ್ಲಾ ಉಪಾಧ್ಯಕ್ಷ ಡಾ. ಪ್ರಕಾಶ ಹೊಸಮನಿ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ ಅಧಿಕಾರಿಗಳ ಗಮನ ಸೆಳೆದು ಪರಿಹರಿಸಲು ಜನಪ್ರತಿನಿಧಿಗಳು ಪ್ರಯತ್ನ ಮಾಡೇಕು. ನೂತನ ಕೆಡಿಪಿ ನಾಮನಿರ್ದೇಶಿತ ಸದಸ್ಯ ಕಲ್ಲಪಾ ಕಟ್ಟಿಯವರು ಹುಟ್ಟು ಹೋರಾಟಗಾರರು ನಿಷ್ಠಾವಂತ ಸಾಮಾಜಿಕ ಸೇವಕರು ಆಗಿದ್ದಾರೆ ಎಂದು ಹೇಳಿದರು.

ದಲಿತ ಮುಖಂಡರಾದ ಶಂಕರ ಖಾತೆದಾರ ಮಾತನಾಡಿ ದಲಿತ ಜನಾಂಗದ ಯುವಕರು ನಿರುದ್ಯೋಗಿಗಳಾಗಿದ್ದಾರೆ. ಅವರ ಜೀವನೋಪಾಯಕ್ಕಾಗಿ ಕೆಲಸ ಕೊಡಿಸಬೇಕು ದಲಿತರು ಸಮಾಜದ ಮುಖ್ಯ ವಾಹಿನಿಗೆ ತರುವ ಕಾ ನಡೆಯಬೇಕೆಂದರು. ಈ ವೇಳೆಯಲ್ಲಿ ದಲಿತ ಮುಖಂಡರಾದ ಪರಶುರಾಮ ಮಾದರ, ಮಹಾದೇವ ಖಡಕಭಾವಿ, ರವಿ ಖಾತೇದಾರ, ಭೀಮಪ್ಪಾ ದಿನ್ನಿಮನಿ, ದುಂಡಪ್ಪಾ ಕಾಂಬಳೆ, ಸುರೇಶ ಹಗೆದಾಳ, ದಲಿತಸೇನೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಕೆಂಪಣ್ಣಾ ಹರಿಜನ, ಗೋಪಾಲ ತಳವಾರ, ಬಸವಣ್ಣಿ ಹರಿಜನ, ವಿಜಯ ಬೇವಿನಕಟ್ಟಿ, ರಾಜು ವಡ್ಡರ, ರಾಕೇಶ ಕಾಂಬಳೆ, ಮುದಕಪ್ಪ ಹರಿಜನ ಮುಂತಾದವರು ಉಪಸ್ಥಿತರದ್ದರು.

## ಮಿಷನ್ ವಾತ್ಸಲ್ಯ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ, ತರಬೇತಿ ಕಾರ್ಯಾಗಾರ

# ಕುಟುಂಬದಲ್ಲಿ ಹೆಣ್ಣು ಮಕ್ಕಳ ಪಾತ್ರ ಮಹತ್ವದ್ದು; ಮುರಳಿ ಮೋಹನ ರೆಡ್ಡಿ



ಬೆಳಗಾವಿ,ಮಾ.: ಕುಟುಂಬದಲ್ಲಿ ಹೆಣ್ಣು ಮಕ್ಕಳ ಪಾತ್ರ ತುಂಬಾ ಮಹತ್ವವಾಗಿದ್ದು, ಕುಟುಂಬದ ಸರ್ವಾಂಗೀಣ ಅಭಿವೃದ್ಧಿ ಮತ್ತು ಏಳಿಗೆಗಾಗಿ ಸತತವಾಗಿ ಶ್ರಮಿಸುತ್ತಾಳೆ. ಮಕ್ಕಳ ಮನಸ್ಥಿತಿ ತುಂಬಾ ಸೂಕ್ಷ್ಮತೆಯಾಗಿದ್ದು. ಮಕ್ಕಳ ಮುಂದೆ ಯಾವುದೇ ಕೆಲಸವನ್ನು ತುಂಬಾ ಜಾಗೃತೆಯಿಂದ ನಿರ್ವಹಿಸಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮುರಳಿ ಮೋಹನ ರೆಡ್ಡಿ ಅವರು ನುಡಿದರು. ಬೆಳಗಾವಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಬೆಳಗಾವಿ ಇವರ ಸಂಯುಕ್ತಾಶ್ರಯದಲ್ಲಿ ಮಾ. 11 ರಂದು ಜರುಗಿದ ಮಿಷನ್ ವಾತ್ಸಲ್ಯದ, ಯೋಜನೆಗಳು, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ 2006,ದತ್ತು ಅದಿನಿಯಮ ಕಾಯ್ದೆ–2022 ರ ಕುರಿತು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಯೋಜನೆಯಡಿ ಬರುವ ಎಲ್ಲ ಸಿಬ್ಬಂದಿಗಳಿಗೆ ಹಾಗೂ ಮಹಿಳಾ ಸ್ವ ಸಹಾಯ ಸಂಘದ ಮುಖ್ಯಸ್ಥರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮನ್ನು ಉದ್ಘಾಟಿಸಿ ಅವರು ಮಾತನಾಡಿದರು.ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ತಾಯಿ ಪಾತ್ರ ತುಂಬಾ ಜವಾಬ್ದಾರಿಯುತವಾಗಿದ್ದು ಆ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ಆಸಕ್ತಿ ಕಡಿಮೆಯಾಗಬಾರದು ಎಂದರು. ಮಕ್ಕಳಲ್ಲಿ ಗಂಡು, ಹೆಣ್ಣು ಎಂಬ ಭೇದ ಭಾವ ಮಾಡದೆ ಸಮಾನರಾಗಿ ಕಾಣಬೇಕು. ಇತ್ತೀಚಿನ ದಿನಮಾನಗಳಲ್ಲಿ ಕೌಟುಂಬಿಕ ಕಲಹಗಳು ಹೆಚ್ಚಾಗಿ ಕಂಡು ಬರುತ್ತಿದ್ದು. ಮಹಿಳೆಯರು ತಮ್ಮ ಕುಟುಂಬದ ಜವಾಬ್ದಾರಿಯನ್ನು ಅರಿತುಕೊಂಡು ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಲು ಮುಂದಾಗುವಂತೆ ತಿಳಿಸಿದರು. ಇತ್ತೀಚಿನ ದಿನಗಳಲ್ಲಿ ಬಾಲ್ಯ ವಿವಾಹ ಹಾಗೂ ಪೋಕ್ಸೊ ಪ್ರಕರಣಗಳು ತುಂಬಾ ಕಂಡು ಬರುತ್ತಿದ್ದು, ಮಕ್ಕಳಿಗೆ ಬಾಲ್ಯ ವಿವಾಹ ನಿಷೇಧ ಕಾಯ್ದೆ, ಪೋಕ್ಸೋ ಕಾಯ್ದೆ ಕುರಿತು ತಿಳುವಳಿಕೆ ನಿಡುವ ಕಾರ್ಯವಾಗಬೇಕಾಗಿದೆ ಎಂದರು. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಮಹಾಂತೇಶ ಭಜಂತ್ರಿ ಅವರು ಮಾತನಾಡುತ್ತಾ ಹೆಣ್ಣು ಮಗಳಾಗಿ ತಂದೆಯ ಗೌರವ, ಹೆಂಡತಿಯಾಗಿ ಗಂಡನ ಕಷ್ಟ ಸುಖದಲ್ಲಿ ಭಾಗಿಯಾಗಿ, ತಾಯಿಯಾಗಿ ತನ್ನ ಮಕ್ಕಳ ಪೋಷಣೆ ಜವಾಬ್ದಾರಿಯ ಜೊತೆಗೆ ಭಾರತದ ನಾರಿಯಾಗಿ ವಿಶ್ವಕ್ಕೆ ಮಾದರಿಯಾಗಬೇಕಿದೆ ಎಂದರು. ತದನಂತರ ಬಾಲ್ಯ ವಿವಾಹ ನಿಷೇಧ ಕಾಯ್ದೆ 2006, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವ ಕಾಯ್ದೆ 2012, ದತ್ತು ಅಧಿನಿಯಮ ಕಾಯ್ದೆ 2022ರ ಹಾಗೂ ಬಾಲನ್ಯಾಯ ಕಾಯಿದೆ ಅಡಿಯಲ್ಲಿ ಮಕ್ಕಳಿಗೆ ಇರುವ ಹಕ್ಕುಗಳ ಬಗ್ಗೆ ವಿವರಿಸಿದರು.ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಯೋಜನೆಯಡಿ ಬರುವ ಎಲ್ಲ ಸಿಬ್ಬಂದಿಗಳಿಗೆ ಹಾಗೂ ಮಹಿಳಾ ಸ್ವ ಸಹಾಯ ಸಂಘದ ಮುಖ್ಯಸ್ಥರು ಉಪಸ್ಥಿತರಿದ್ದರು.

# ವಿವಿದ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಯರಗಟ್ಟಿ : ಯಕ್ಕುಂಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಗ್ರಾಮಗಳಿಗೂ ಮೂಲಭೂತ ಸೌಕರ್ಯ ಒದಗಿಸುವುದು ನನ್ನ ಗುರಿ ಎಂದು ಗ್ರಾಮ ಪಂಚಾಯತ ಅಧ್ಯಕ್ಷೆ ಪೈರೋಜಾ ಬಾ ಬಾರಿಗಿಡದ ಹೇಳಿದರು. ಅವರು ಕಾರ್ಲಕಟ್ಟಿ ಗ್ರಾಮದಲ್ಲಿ ಸಿ.ಸಿ. ರಸ್ತೆ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡುತ್ತಿದ್ದರು. ಇದೇ ವೇಳೆ 15 ನೇ ಹಣಕಾಸು ಅನುದಾನದಲ್ಲಿ ಯಕ್ಕುಂಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಧೂಪದಾಳ ಗ್ರಾಮದ 1 ನೇ ವಾರ್ಡ, 3ನೇ ವಾರ್ಡನಲ್ಲಿ ಸಿಸಿ ರಸ್ತೆ ನಿರ್ಮಿಸುವುದು, ಯಕ್ಕುಂಡಿ ಗ್ರಾಮದ 3 ನೇ ವಾರ್ಡನಲ್ಲಿ ಸಿಸಿ ರಸ್ತೆ ನಿರ್ಮಾಣ, ಯಕ್ಕುಂಡಿ ಗ್ರಾಮದ 5ನೇ ವಾರ್ಡನಲ್ಲಿ ಬಾಬಣ್ಣವರ ಅವರ ಮನೆಯ ಹತ್ತಿರ ಒಳಚರಂಡಿ ಮತ್ತು ಸಿಡಿ ನಿರ್ಮಿಸುವುದು, 4ನೇ ವಾರ್ಡಿನಲ್ಲಿ ಸಿಸಿ ರಸ್ತೆ ನಿರ್ಮಾಣಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಪಿಡಿಒ ವೈ.ಪಿ. ಬೋಳಶೆಟ್ಟಿ, ಗ್ರಾಪಂ ಉಪಾಧ್ಯಕ್ಷೆ ಮಾಸಾಬಿ ಇಮ್ಮನ್ನವರ, ಗ್ರಾಪಂ ಸದಸ್ಯರಾದ ಹಸನಸಾಬ ಬಾರಿಗಿಡದ, ಮಹೇಶ ಹೊಂಗಲ, ಶಿವಾನಂದ ಕಂಬಿಯವರ, ಕೃಷ್ಣಪ್ಪ ಕಂಬಾರ, ತಾಲೀಬ ಮುಜಾವರ, ಪ್ರಕಾಶ ಪಾಶ್ಚಾಪೂರ, ಬಾದಶಾ ದೊಡಮನಿ, ಈರಪ್ಪ ಮಾದರ, ಶೇಖವ್ವ ತಿಮ್ಮೋಶಿ, ಮಲ್ಲವ್ವ ಮಾದರ, ಭೀಮವ್ವ ಮಾದರ, ಹಣಮಂತ ರೂಢನ್ನವರ, ಶಿವನಾಯ್ಕ ಪಾಟೀಲ, ನಿಜಾಮುದ್ದಿನ ಬಾರಿಗಿಡದ, ರಫೀಕ ದಿನ್ನಿಮನಿ, ಶಂಕರ ಡೊಳ್ಳಿನ, ವಿಷ್ಣು ಕಾರಭಾರಿ, ರಾಮು ದೊಡಮನಿ, ರಫೀಕ ಮುಲ್ಲಾ, ಗೌಸ ಬಾರಿಗಿಡದ, ಬಸು ಹೊನ್ನೆನ್ನವರ ಮತ್ತು ಇತರರು ಇದ್ದರು, ರಾಮು ದೊಡಮನಿ, ರಫೀಕ ಮುಲ್ಲಾ, ಗೌಸ ಬಾರಿಗಿಡದ, ಬಸು ಹೊನ್ನೆನ್ನವರ ಮತ್ತು ಇತರರು ಇದ್ದರು,